ಆನೇಕಪ್ಪನ ಕೆಲಸಕ್ಕೆ ಜಮ್ಮಾದಾರ.

ತಾರೀಖು 15ನೇ ಜನವರೀ 1884.

1884ನೇ ಇಸವಿ ಮೇ 1ನೇ ತಾರೀಖು ಲಾಗಾಯತು ಆನೆಗೆಳನ್ನು ಹಿಡಿಯುವದರಲ್ಲಿ ಮಾಹೆತ್‌ದಾರನಾದ ಒಬ್ಬ ಲಾಯಕ್ಕ್ ಜಮಾದಾರ್ ಇಸಂ ವಂದು (ಮುಸಲ್‌ಮಾನರಾಗಿದ್ದರೆ ವಳ್ಳೀದು) ಜೀಕಾಗಿರುತ್ತೆ. ಕನ್ನಡ ಭಾಷೇಯಲ್ಲಿ ಸಂಪೂರ್ಣವಾಗಿ ವ್ಯಾವಹಾರಿಕ ಜ್ಞಾನವು ಮುಖ್ಯವಾಗಿರುತ್ತೆ. ಕಾಡುಗಳಲ್ಲಿ ವಾಸಮಾಡುವದಕ್ಕೆ ವಾಡಿಕೆಯವ ದೃಢವಾದ ದೇಹಸ್ಥಿತಿಯುಳ್ಳವನು ವಿನಾ ಇತರರು ದರಖಾಸ್ತು ಮಾಡಬೇಕಾದ್ದಿಲ್ಲವು.

ದರಖಾಸ್ತುದಾರರ ಲಾಯಕಿಬೀಗಳು, ಪೂರ್ವದ ಯೋಗ್ಯತೆಗಳು, ಖಾಯಿಷ್ ಮಾಡುವ ಸಂಬಳಗಳ ದರ, ವಯಸ್ಸು ವಗೈರೇಯನ್ನು ನಮೂದಿಸಿ ಅವರ ಸರಟಿಫಿಕೇಟುಗಳನ್ನು ಮೈಸೂರು ಫಾರೆಸ್ಟ್ ವ ಫಾರಂಗಳ ಸೂಪರ್‌ಟೆಂಡೆಂಟರವರಿಗೆ ಕೂಡ್ಲೆ ಕಳುಹಿಸತಕ್ಕದ್ದು.

ಹಳ್ಳೀ ಆನೆಗಳ ಸರಪಣಿಗಳು.

ತಾರೀಖು 15ನೇ ಜನವರೀ 1884.

ಹೊಸ ಸರಪಣಿಗಳ ಅರ್ಜ್ ಬಾಜಾರ್ ನಿರಖಿಗೆ ಬಹಳ ಕಡಮೆಯಾದ ದರಗಳ ಪ್ರಕಾರ, ಆಕಾರಗಳ ಬಾಬತು ಉಪಯೋಗಿಸಲ್ಪಟ್ಟ ಆನೆಯ ಸರಪಣಿಗಳನ್ನು ಮೈಸೂರಲ್ಲಿ ಬದಗಿಸುವ ಬಗ್ಯೆ ದರಖಾಸ್ತುಗಳನ್ನು ಕೊಡಬಹುದೆಂದು ಇದರಡಿ ರುಜು ಮಾಡಿರುವವರಿಂದ ಕೋರಲ್ಪಡುತ್ತೆ. ಪ್ರತಿ ದರಖಾಸ್ತಿನಲ್ಲಿಯೂ, ಸದರೀಯವರ ವಶದಲ್ಲಿರುವ ಸರಪಣಿಗಳ ಸಂಖ್ಯೆ ಮತ್ತು ಆಕೃತಿ, ವಿಸಿಷ್ಟ ಸರಪಣಿಗಳ ತೂಕ, ಸದರೀ ಸರಪಣಿಗಳನ್ನು ಯಾವ ದರಕ್ಕೆ ಬದಗಿಸುವಂತೆ ಹೇಳುತ್ತಾರೋ ಆಬಾಬತು ದರ ಯಿವ್ವುಗಳನ್ನು ನಮೂದಿಸತಕ್ಕದ್ದು.

ವಳ್ಳೆಯ ಸ್ಥಿತಿಯಲ್ಲಿಲ್ಲದ ಯಾವ ಸರಪಣಿಗಳಾಗಲಿ ತಿರಸ್ಕರಿಸಲ್ಪಡುವವು.

ಸಿ. ಇ. ಯಂ. ರಸ್ಸಲ್,
ಮೈಸೂರು ಡಿ|| ಫಾರೆಸ್ಟ್ ವ ಗವರ್ನ್‌ಮೆಂಟ್
ಫಾರಂಗಳ ಸೂಪರ್‌ಟೆಂಡೆಂಟ್.

ಕಡೂರು ಡಿಸ್ಟ್ರಿಕ್ಟ್ ಸಬಾರ್ಡಿನೇಟ್ ಜಡ್ಜ್‌ರೀಯವರ ಕೋರ್ಟಿನಲ್ಲಿ.

1884ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 4.

ವೃತಪಟ್ಟ ಬೇಲೂರ ತಾಲ್ಲೂಕು ನಡುವಾಲ ಫಿರಕಾ ಕೆನಿವಾರ ಸಕ್ಕತೆ ಹೋಬಳಿ ಕಳಸೆರಿ ಗ್ರಾಮದ ಚಕ್ಕೆಗೌಡಯಾನೆ

ಬಿಳೇಗೌಡನ ಆಸ್ತಿ ವಿಷಯವಲ್ಲಿ—

ಅರ್ಜೀದಾರ್ ಚನ್ನಮ್ಮ ಹೆಗ್ಗಡತಿಯು, ವೃತಪಟ್ಟ ಬಿಳೇಗವ್ಡನು ವಾಗ ಆಗಬೇಕೆಂಬ ಹಕ್ಕುದಾರೀ ಮೇಲೆ ಕಳಸೆರಿ ಚನ್ನಮ್ಮನು ಕಳಸೆರಿ ವಾಸಸ್ಥನಾಗಿ ವೃತಪಟ್ಟ ಬಿಳೇಗವ್ಡನ ಜಿಂದಗೀ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಚಕ್ಕನ್ನಮ್ಮನ ಅರ್ಜೀಯನ್ನು 1884ನೇ ಇಸವೀ ಫಿಬ್ರವರೀ ತಿಂಗಳು ತಾರೀಖು 21ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವೃತಪಟ್ಟ ಬಿಳೇಗವ್ಡನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಸುವಡಿಸಿದೆ.

1884ನೇ ಇಸವಿ ಜನವರೀ ತಿಂಗಳು 18ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಬಿ. ತಿರುಮಲಾಚಾರ್,
ಸಬ್ ಜಡ್ಜ್.

Mysore Government Press, Bangalore.—1884.